ಕೋಲಾರ ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ತಪಸೀಲ್‌ವಾರು ಮಾಡಲ್ಪಟ್ಟಿರುವ ರಿಜಿಸ್ಟ್ರಾದ 3 ದಸ್ತ್ಯೆವಜುಗಳು 2 ವರುಷಗಳಿಂದ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿ ನಿಂತಿರುತ್ತೆ. ಬಾದ್ಗೀತೆವುಳ್ಳವರು ಈ ನೋಟಿಫಿಕೇರ್ಷ ತಾರೀಖು ಲಾಗಾಯತು 1 ತಿಂಗಳಲ್ಲಿ ಮುಳಬಾಗಲ್ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿಯಾದ ಫೀಜ್ ಪಾವತೀವಾಡಿ ಡಿಟೋ ದಸ್ತ್ಯೆವಜುಗಳನ್ನು ವಾಪಸ್ ಪಡಿಯಬಹುದು. ಹಾಗೆ ವಾಯಿದೇ ಒಳಗೆ ಹಾಜರಾದೇ ಹೋದರೆ ಅವುಗಳನ್ನ ಆಕ್ಟಿನ 85ನೇ ಸೆಕ್ಷರ್ಷ ಮೇರಿಗೆ ನಾಶ ಮಾಡಲ್ಪಡುವದು.

ಮುಳಬಾಗಲ್ ಸಬ್ ರಿಜಿಸ್ಟ್ರಿ ಆಫೀಸ್.

ಆಫೀಸ್ ಹೆಸರು.	ಬುಕ್ಕು ನಂಬರ್ ಮತ್ತು ದಸ್ತ್ಯೆವಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ವಗೈರೇ.	ಬರಸಿಕೊಂಡವರ ಹೆಸರು ವಗೈರೇ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ತಪಸೀಲು.
	1ನೇ ನಂಬರ್ ಬುಕ್ಕು 1880-1881ನೇ ಇಸವಿ 72ನೇ ನಂಬರ್.	ಕೋಲಾರ ತಾಲ್ಲೂಕು ಕಾಮಸಂದ್ರದಲ್ಲಿ ಇರುವ ವೈಶ್ಯ ಶ್ರೀಮತಿಪ್ಪನವರು ಚಂಗಲರಾಯಶೆಟ್ಟಿಮಗ ನಾಗಿಶೆಟ್ಟಿ.	ಕೋಲಾರದಲ್ಲಿ ಇರುವ ವೈಶ್ಯ ಬೊಗರಂ ವೆಂಕಟಶಾಮಯ್ಯನ ಮಗ ಲಕ್ಷ್ಮಯ್ಯ	7ನೇ ಡಿಸೆಂಬರ್ 1880	7ನೇ ಡಿಸೆಂಬರ್ 1880	50 ರೂಪಾಯಿನ ಜಮ್ಮಿಕ್ರಯಪತ್ರ.
	ಡಿಟೋ ಬುಕ್ಕು 1881-82ನೇ ಇಸವಿ 79ನೇ ನಂಬರ್.	ಮುಳಬಾಗಲ್‌ನಲ್ಲಿಯಿರುವ ಸ್ಮಾರ್ತ ಬ್ರಾಹ್ಮಣ. ರೇವಣೂರ ವೆಂಕಟನಾರಣಭಟ್ಟರಮಗ ತಿಮ್ಮಣಭಟ್ಟ	ಮುಳಬಾಗಲ್ ತಾಲ್ಲೂಕು ಮುಡಿಯನೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ವೆಂಕಟಸುಬ್ಬಾಶಾಸ್ತ್ರಿಗಳ ಮಗ ವೆಂಕಟೇಶ ಶಾಸ್ತ್ರಿ	17ನೇ ಫೆಬ್ರವರೀ 1882	17ನೇ ಫೆಬ್ರವರೀ 1882	80 ರೂಪಾಯಿನ ವೃತ್ತಿಜಮ್ಮಿಗಳನ್ನು ಆಧಾರಮಾಡಿ ಬರದುಕೊಟ್ಟ ಪತ್ರ.
	ಡಿಟೋ ಬುಕ್ಕು 1882-83ನೇ ಇಸವಿ 17ನೇ ನಂಬರ್.	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ತಿಸಬ್ಬರಿಣ ನವ ದೊಡ್ಡ ಗಂಗಣ್ಣ	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ರಂಗೇಗೌಡನ ಮಗ ವೆಂಕಟಸುಬ್ಬಣ್ಣ	29ನೇ ಜೂನ್ 1882	29ನೇ ಜೂನ್ 1882	190 ರೂಪಾಯಿನ ಜಮ್ಮಿಕ್ರಯಪತ್ರ.

ಬಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ನಂ. 7. ತಾರೀಖು 16ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಾಮರಾಜನಗರದ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರ ಸೋಣಾದ ದಸ್ತಾವೇಜುಗಳನ್ನ ಹಾಜರ್‌ಮಾಡಿದವರೇ ಆಗಲಿ ಅಥವಾ ವಾಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ್ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇರ್ಷ ಆಕ್ಟು 85ನೇ ಸೆಕ್ಷರ್ಷ ಅನುಸರಿಸಿ ಅವುಗಳನ್ನ ನಾಶಪಡಿಸಲ್ಪಡುವದು.